ಮೂಲಕ, "ಆಂಡಾಳ್‌ಳನ್ನು ವಿವಾಹ ಮಾಡಿಕೊಡುವ ಮೂಲಕ ನೀವು ನನಗೆ ಮಾವನಾದಿರಿ. ನೀವು ಶ್ರೀವಿಲ್ಲಿಪುತ್ತೂರಿನಲ್ಲಿಯೇ ಇದ್ದುಕೊಂಡು ಸೇವೆಯನ್ನು ಸಲ್ಲಿಸಿ" ಎಂದು ಆದೇಶಿಸಿದನು. ಈ ಅಪರೂಪದ ದೃಶ್ಯವನ್ನು ಕಂಡು, ಅಲ್ಲಿ ನೆರೆದಿದ್ದವರೆಲ್ಲಾ ಪುಳಕಿತರಾಗಿ ಆನಂದಬಾಷ್ಪಗಳನ್ನು ಸುರಿಸಿದರು.

ಶ್ರೀಆಂಡಾಳ್‌ನ ಪ್ರೇಮಮಯವಾದ, ಅಮೃತಮಯವಾದ ಶ್ರೇಷ್ಠವಾದ ಭಕ್ತಿಗೆ ಎಣೆಯೇ ಇಲ್ಲ. ನಾಲಾಯಿರ ದಿವ್ಯಪ್ರಬಂಧ ದಲ್ಲಿ, ಆಕೆ ರಚಿಸಿದ ೧೭೩ ಪಾಶುರಗಳು ಇವೆ. **'ತಿರುಪ್ಪಾವೈ', 'ನಾಚ್ಚಿಯಾರ್ ತಿರುಮೊಳಿ'**, ಮತ್ತು **'ವಾರಣಮಾಯಿರಂ'** ಎಂಬುವು ಇವಳ ಸ್ವತಂತ್ರ ಕೃತಿಗಳು. 'ತಿರುಪ್ಪಾವೈ'ನ ೩೦ ಪಾಶುರಗಳಲ್ಲಿ ಆಂಡಾಳ್ ತನ್ನನ್ನು ನಂದಗೋಕುಲದ ಗೋಪಿಯೆಂದು ಭಾವಿಸಿಕೊಂಡು, ಮುಂಜಾವಿನಲ್ಲಿ ಎದ್ದು, ತನ್ನ ಗೆಳತಿಯರನ್ನು ನಿದ್ದೆಯಿಂದ ಎಬ್ಬಿಸುವ ಸೊಗಸನ್ನು ಕಾಣಬಹುದು. ದೃಢಭಕ್ತಿಯಿಂದ ರಚಿತವಾಗಿರುವ ಈ ಪಾಶುರಗಳನ್ನು ವಿಶೇಷವಾಗಿ ಮಾರ್ಗಶಿರ ಮಾಸದಲ್ಲಿ, ಶ್ರೀವಿಷ್ಣು ದೇವಾಲಯಗಳಲ್ಲಿ ಹಾಗೂ ಶ್ರೀವೈಷ್ಣವರ ಮನೆಗಳಲ್ಲಿ ಭಕ್ತಿಶ್ರದ್ಧೆಗಳಿಂದ ಹಾಡುತ್ತಾರೆ.

ಪ್ರಾಯದಲ್ಲಿರುವ ಹುಡುಗಿಯರು ಒಬ್ಬರನ್ನೊಬ್ಬರು ಎಬ್ಬಿಸು ವಾಗ ಕಂಡುಬರುವ ಉಲ್ಲಾಸ, ಉತ್ಸಾಹ, ಪರಿಹಾಸ, ಕೀಟಲೆ, ಗೇಲಿ – ಇವೆಲ್ಲವನ್ನೂ ಈ ಪಾಶುರಗಳಲ್ಲಿ ನಾವು ಕಾಣಬಹುದು. ಮೇಲ್ನೋಟಕ್ಕೆ ಈ ರೀತಿ ಕಂಡರೂ ಇವುಗಳ ಗೂಢಾರ್ಥವು ತುಂಬಾ ವಿಶಿಷ್ಟವಾದುದು. ಅಜ್ಞಾನ ಎಂಬ ಕತ್ತಲಿನಲ್ಲಿ ಮಲಗಿರುವ ಜೀವಿಯನ್ನು ಎಚ್ಚರಿಸಿ, ಆತ್ಮಜ್ಞಾನ ಪಡೆಯುವ ವಿಧಾನಗಳನ್ನು ಕ್ರಮವಾಗಿ ವಿವರಿಸುವ ಈ ಪಾಶುರಗಳ ಅಧ್ಯಯನ ಮನಸ್ಸಿಗೆ ಮುದವನ್ನು ನೀಡುತ್ತದೆ.

ಭಕ್ತಿರಸ ತುಂಬಿತುಳುಕುವ ೨೯ ನೆಯ ತಿರುಪ್ಪಾವೈ ಪಾಶುರ ವನ್ನು ಸವಿಯೋಣ:

**ಪ್ರಾತಃಕಾಲದಲ್ಲಿ ಬಂದು ನಿನ್ನನ್ನು ಸೇವಿಸಿ**
**ನಿನ್ನ ಹೊಂದಾವರೆಯಡಿಯನು ಸ್ತುತಿಸುವ ಫಲವನ್ನಾಲಿಸು**
**ದನಕಾಯ್ದು ಬದುಕುವವರ ಕುಲದಲ್ಲಿ ಜನಿಸಿದ ನೀನು**
**ನಮ್ಮ ಕೈಂಕರ್ಯವನ್ನು ಸ್ವೀಕರಿಸುವೆ**
**ಇಂದು ನಮ್ಮ ಕೈಂಕರ್ಯವನ್ನು ಸ್ವೀಕರಿಸುವೆ**
**ಎಂದು ನಾವು ಬಂದಿಲ್ಲ**
**ಗೋವಿಂದಾ, ಎಂದೆಂದೂ, ಏಳೇಳು ಜನ್ಮಕ್ಕೂ ನಿನ್ನ**
**ಅಧೀನದಲ್ಲಿ ಇರುವವರು ನಿನಗೆ ಮಾತ್ರ ಆಳಾಗುವವರು**
**ನಮ್ಮ ಬೇರೆ ಕಾಮನೆಗಳನ್ನು ತಪ್ಪಿಸಿ ಅನುಗ್ರಹಿಸು**

*(ತಿರುಪ್ಪಾವೈ, ೨೯)*

ಆಂಡಾಳ್ ರಚಿಸಿರುವ **'ನಾಚ್ಚಿಯಾರ್ ತಿರುಮೊಳಿ'**ಯಲ್ಲಿ ಅವಳ ಮಧುರಭಾವ ಉಕ್ಕಿ ಪ್ರವಹಿಸುತ್ತದೆ. **'ಮೇಘವಿಡುದೂತು'** ಎಂಬ ಪಾಶುರದಲ್ಲಿ ಆಕೆ ತನ್ನ ವಿರಹವನ್ನು ಹೀಗೆ ವಿವರಿಸಿದ್ದಾಳೆ:

**ಮದ್ದಾನೆಯಂತೆ ಮೇಲೆದ್ದ ಮೋಡಗಳೆ,**
**ವೆಂಕಟಪತಿಯಲ್ಲಿ ಬಾಳುವ ಮೋಡಗಳೆ,**
**ಎಂದೆಂದೂ ತಾನೇ ಗತಿ ಎಂದು ನಾಗಶಯನನು ನುಡಿದ**
**ನುಡಿಯನು ಎಣಿಸದೆ**
**ಬಳ್ಳಿಯಂತಿರುವ ವನಿತೆಯನ್ನು ವಧೆ ಮಾಡಿದನು**
**ಎಂಬ ನುಡಿಯನ್ನು ಮಾನವರು ಮೆಚ್ಚುವರೆ?**

***(ನಾಚ್ಚಿಯಾರ್ ತಿರುಮೊಳಿ–ವಿಣ್ಣೀಲೇ ಮೇಲಾಪ್ಪು, ೯)***

ಆಂಡಾಳ್‌ಗೂ ಶ್ರೀರಂಗನಾಥನಿಗೂ ಕನಸಿನಲ್ಲಿ ವಿವಾಹ ಆದುದನ್ನು ವಿವರಿಸುವ ಪಾಶುರಗಳೇ **'ವಾರಣಮಾಯಿರಂ'**. ಶ್ರೀವೈಷ್ಣವ ಕುಟುಂಬಗಳಲ್ಲಿ ಆಗುವ ವಿವಾಹಗಳಲ್ಲಿ ನಡೆಯುವ ವೈಭವವನ್ನು ಆ ಪಾಶುರಗಳಲ್ಲಿ ವಿವರಿಸಿದ್ದಾರೆ. ಇವನ್ನು ತೆಂಗಲೈ ಶ್ರೀವೈಷ್ಣವರ ವಿವಾಹಕಾಲದಲ್ಲಿ ಇಂದಿಗೂ ಹಾಡುತ್ತಾರೆ.

**ಸಾವಿರ ಆನೆಗಳು ಬಲಬಂದು ಆವರಿಸುತ್ತ**
**ಪರಬ್ರಹ್ಮ ನಾರಾಯಣನು ನನ್ನ ಮುಂದೆ ಚಲಿಸುವನು.**
**ಎಲ್ಲೆಡೆಯೂ ಹೊನ್ನ ಪೂರ್ಣಕುಂಭವನಿಟ್ಟು**
**ತೋರಣಗಳನ್ನು ಕಟ್ಟಿದಂತೆ ಕನಸು ಕಂಡೆ ಸಖಿ, ನಾನು.**

***(ವಾರಣಮಾಯಿರಂ, ೧)***

**ಮದ್ದಳೆಯ ನುಡಿಸುತ್ತ ಶಂಖವನು ಊದುತ್ತ**
**ಮುತ್ತಿನ ಸರಗಳನ್ನು ಕಟ್ಟಿದ ಚಪ್ಪರದ ಕೆಳಗೆ**
**ನನ್ನ ಮನೋಹರನು ಮಧುಸೂದನನು ಬಂದು**
**ನನ್ನ ಕರವನ್ನು ಹಿಡಿದಂತೆ ಕನಸು ಕಂಡೆ ಸಖಿ, ನಾನು**

***(ವಾರಣಮಾಯಿರಂ, ೬)***

ನಾಥಮುನಿಗಳು, ಯಾಮುನಾಚಾರ್ಯರು ಮತ್ತು ಶ್ರೀರಾಮಾನುಜರಿಂದ ಶ್ರೀವೈಷ್ಣವ ವಿಶಿಷ್ಟಾದ್ವೈತ ಸಿದ್ಧಾಂತವು ರೂಪುಗೊಂಡಿತು. ಶ್ರೀನಾಥಮುನಿಗಳು ಆಳ್ವಾರರ ಜೀವನ ಸಂದೇಶವನ್ನು ಪ್ರಚಾರ ಮಾಡಿದರು. ಶ್ರೀರಾಮಾನುಜರಿಗೆ ಆಂಡಾಳ್ ರಚಿಸಿರುವ ತಿರುಪ್ಪಾವೈಯಲ್ಲಿ ತುಂಬ ಆಸಕ್ತಿ. ಅವರು 'ತಿರುಪ್ಪಾವೈ ಜೀಯರ್' ಎಂದೇ ಖ್ಯಾತಿ ಹೊಂದಿದ್ದಾರೆ.

ಆಳ್ವಾರರ ಹಿರಿಮೆಯನ್ನು ಶ್ರೀವೇದಾಂತದೇಶಿಕರು ಹೀಗೆ ಕೊಂಡಾಡಿದ್ದಾರೆ: "ಆಳ್ವಾರರ ಪಾಶುರಗಳನ್ನು ಅಧ್ಯಯನ ಮಾಡಿ ಗಳಿಸಿದ ಜ್ಞಾನಪ್ರಕಾಶವನ್ನು ಅವಲಂಬಿಸಿಯೇ ಸಂಸ್ಕೃತದಲ್ಲಿರುವ ವೇದಾಂತದ ಅಂತರಾರ್ಥವನ್ನು ಅರಿತುಕೊಳ್ಳಲು ನನಗೆ ಸಾಧ್ಯವಾಯಿತು."


ಜಗತ್ತಿನ ಭಕ್ತಿಸಾಹಿತ್ಯವೆಂಬ ಆಕಾಶದಲ್ಲಿ ಆಳ್ವಾರರ ಶ್ರೇಷ್ಠ ಪಾಶುರಗಳು ಎಂದಿಗೂ ನಂದದ ನಕ್ಷತ್ರಗಳಾಗಿ ಇಂದಿಗೂ ಮಿನುಗುತ್ತಿವೆ. ●

# ನುಲಿಯ ಕಾಯಕದ ಚಂದಯ್ಯ

ಎಸ್.ಎನ್.ಬಸವರಡ್ಡಿ

**ಕಾಯಕ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು, ಲಿಂಗ ಮುಂದಿದ್ದಡೂ ಹಂಗು ಹರಿಯಬೇಕು** ಎಂಬ ಶರಣರ ಸೊಳ್ನುಡಿ ಮಹಾಶಿವಭಕ್ತ 'ನುಲಿಯ ಚಂದಯ್ಯ'ನ ಬದುಕಿನಲ್ಲಿ ಸುವರ್ಣಕ್ಕೆ ಸುಗಂಧವಿಟ್ಟಂತೆ ಮೂರ್ತರೂಪವನ್ನು ಪಡೆದುಕೊಂಡಿದೆ. ವೀರಶೈವ ಧರ್ಮದ ಪರಂಪರೆಯಲ್ಲಿ ಗುರು-ಲಿಂಗ-ಜಂಗಮರ ಆಚಾರ-ವಿಚಾರಗಳು ಕಾಯಕರೂಪವಾಗಿ 'ಸಮಾಜೋದ್ಧಾರ' ಪರವಾಗಿವೆ. ಇದೇ ಆದರ್ಶವು ಶ್ರದ್ಧಾಭಕ್ತಿವಿಶ್ವಾಸಪೂರ್ಣ ಜ್ಞಾನಸಹಿತವಾಗಿ, ಕರ್ತವ್ಯವನ್ನು ಈಶ್ವರಾರ್ಪಣ ಮನೋಭಾವದಿಂದ ಆಚರಿಸುವ 'ಆತ್ಮಧರ್ಮ'ವಾಗಿಯೂ, ನಡೆ-ನುಡಿಯಲ್ಲಿನ 'ಕರ್ಮಯೋಗ'ವಾಗಿಯೂ ನುಲಿಯ ಚಂದಯ್ಯನ ಜೀವನದಲ್ಲಿ ಬಿಂಬಿತಗೊಂಡಿದೆ.

ಯಾವ ಕಾಯಕವಾದರೇನು? **"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ."** ಇವರೆಲ್ಲರೂ ಶಿವಭಕ್ತರೇ, ಕಾಯಕ ಸದ್ಭಾವಿಗಳೇ. ಶಿವಜ್ಞಾನಸಂಪನ್ನನಾಗಿ 'ನುಲಿ ಹೊಸೆವ' (ಹುಲ್ಲಿನಿಂದ ಹಗ್ಗ ಹೊಸೆಯುವ) ಸಾಮಾನ್ಯ ಕಾಯಕವನ್ನು ಮಾಡುತ್ತಲೇ, ಮುಮುಕ್ಷುಗಳಿಗೆ ಕಾಯಕದ ಆದರ್ಶವನ್ನು ನಡೆದು ತೋರಿಸಿ ಖ್ಯಾತನಾಮನಾದವನು, ನುಲಿಯ ಚಂದಯ್ಯ.



ನುಲಿಯ ಚಂದಯ್ಯನ ಹುಟ್ಟು, ಜನ್ಮಸ್ಥಳ, ಕಾಲ ಇವು ನಿಶ್ಚಿತವಾಗಿ ತಿಳಿದಿಲ್ಲ. ವಚನಪಿತಾಮಹ ಡಾ.ಫ.ಗು. ಹಳಕಟ್ಟಿಯವರು ಆತನ ಹುಟ್ಟೂರು ವಿಜಾಪುರಕ್ಕೆ ೩೦ ಕಿ.ಮೀ. ದೂರದಲ್ಲಿರುವ 'ಶಿವಣಗೆ' ಅಥವಾ 'ಶಿವಣಗಿ' ಎಂದು ನಿರ್ಧರಿಸಿದ್ದಾರೆ. ಈತನು ಕ್ರಿ.ಶ. ೧೧೬೦ ರ ಹೊತ್ತಿಗೆ ಕಲ್ಯಾಣದ ಶಿವಾನುಭವ ಮಂಟಪದಲ್ಲಿದ್ದನೆಂದು ಊಹಿಸಲಾಗಿದೆ. ಇವನ ಮೂಲ ಕಸಬು 'ನುಲಿ' ಹೊಸೆಯುವುದು. ನುಲಿ ತಯಾರಿಸಲು ಬೇಕಾಗುವ ನಾರುಹುಲ್ಲು, ನಾರುಬಳ್ಳಿ, ಪುಂಡಿ ಗಿಡಗಳು ಶಿವಣಗಿ ಗ್ರಾಮದ ಹತ್ತಿರದಲ್ಲಿದ್ದ ನಿಸರ್ಗತಾಣವಾದ 'ರಾಮತೀರ್ಥ' ದಲ್ಲಿ ದೊರಕುತ್ತಿದ್ದವು.

**ಗುರು ಬೇಕು ss... ಲಿಂಗ ಬೇಕು ss...;**
**ಜಗಕೆಲ್ಲ ಜಂಗಮ ಬೇಕೇ ಬೇಕು ss...**
**ವಿಭೂತಿ ಬೇಕು ss... ರುದ್ರಾಕ್ಷಿ ಬೇಕು ss...;**
**ಮಂತ್ರ ಪ್ರಸಾದ ಬೇಕೇ... ಬೇಕು ss...**

ಎಂದು ಅಷ್ಟಾವರಣಗಳ ಮಹಿಮೆಯನ್ನು ಹಾಡುತ್ತ, ನಾರು ಬಿಡಿಸಿ, ಅದರಿಂದ ಹಗ್ಗ-ಕಣ್ಣಿ-ಕುಣಿಕೆಗಳನ್ನು ತಯಾರಿಸಿ, ಊರು-ಕೇರಿಗೆ ಹೊತ್ತೊಯ್ದು ಮಾರಾಟಮಾಡಿ, ಬಂದ ಹಣದಲ್ಲಿ ದಾಸೋಹ ಏರ್ಪಡಿಸಿ, ಸಂತೃಪ್ತ ಜೀವನ ಸಾಗಿಸುತ್ತಿದ್ದ ಚಂದಯ್ಯ. ಒಂದು ದಿನ ಅಡವಿಗೆ ಹೋಗಿ ಹುಲ್ಲು (ಪುಂಡಿ ಕಟ್ಟಿಗೆ) ಕೊಯ್ಯುತ್ತಿರಲು ಕೊರಳಲ್ಲಿ ಧರಿಸಿದ್ದ ಇಷ್ಟಲಿಂಗ ನೀರಿಗೆ ಬಿತ್ತು. ಅದನ್ನು ನೋಡಿಯೂ ಚಂದಯ್ಯ ಅದನ್ನು ಮತ್ತೆ ತೆಗೆದುಕೊಂಡು ಧರಿಸಿಕೊಳ್ಳದೆ, ಹುಲ್ಲು ಹೊರೆ ಹೊತ್ತುಕೊಂಡು ಊರತ್ತ ಸಾಗುತ್ತಾನೆ. ಜಂಗಮ ದಾಸೋಹದಲ್ಲಿಯೇ ಲಿಂಗಭಾವನೆ ಉಂಟಾದ್ದರಿಂದ ತನಗೆ ಹೇಗೋ ದಿನವೂ ಜಂಗಮ ಸೇವೆಗೆ ಅವಕಾಶವಿದ್ದೇ ಇದೆ ಎಂದು ಚಂದಯ್ಯ ಲಿಂಗದ ಹಂಗು ಬಿಟ್ಟು ಹೊರಟೇಬಿಡುತ್ತಾನೆ. ನುಲಿಯ ಚಂದಯ್ಯ ಕಾಯಕದ ಕಲಿ; ಜಂಗಮದಾಸೋಹಿ. ಇಷ್ಟಲಿಂಗದ ಹಂಗನ್ನು ಹರಿದವನು. ಚಂದಯ್ಯನಿಗೆ ಜಂಗಮ ದಾಸೋಹವೊಂದೇ ಸಾಕೆನಿಸಿತ್ತು.

ಈ ಪ್ರಸಂಗದ ಬಗ್ಗೆ ಕೆಲವು ಪುರಾಣಗಳು ಹೇಳುವ ವೃತ್ತಾಂತ ಸ್ವಾರಸ್ಯವಾಗಿದೆ. ಅವುಗಳ ಪ್ರಕಾರ ಇಷ್ಟಲಿಂಗವೇ ಚಂದಯ್ಯನ ಜಂಗಮ ಸೇವಾನಿಷ್ಠೆಯನ್ನು ಮೆಚ್ಚಿ, "ಎಲವೋ ಚಂದಯ್ಯ! ನಾನೂ ಬರುತ್ತೇನೆ" ಎಂದು ನೀರಿನಿಂದ ಮೇಲೆದ್ದು ಕೂಗುತ್ತದೆ. "ನಿಮ್ಮ ಭಾವ ಹೇಗಿದೆಯೊ ಹಾಗಿರಿ" ಎಂದು ಹೇಳಿ ಅವನು ಮುಂದೆ ಸಾಗಿಯೇ ಬಿಟ್ಟ.

**ಕಾಯಕದಲ್ಲಿಯೇ ಸಾರ್ಥಕತೆಯನ್ನು ಪಡೆದ ಪರಮ ಶಿವಾನುಭವಿಯೊಬ್ಬನ ವಿಹಂಗಮ ಚಿತ್ರಣವನ್ನು ನಮಗಿತ್ತಿರುವ ಲೇಖಕರು ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕು, ಕೊಂಡಗೂಳಿ ಗ್ರಾಮದ ಕೇಶಿರಾಜ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು.**